**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9777/2021 ಸಿ.ಡಬ್ಲ್ಯೂ–13 ಪಿ.ಡಬ್ಲ್ಯೂ–12

| | | |
|---|---|---|
| ಹೆಸರು | ಃ | ವಾತ್ಸಲ್ಯ |
| ತಂದೆಃಗಂಡ | ಃ | ಸಂಗಣ್ಣಾ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | : | ಪಿ.ಎಸ್.ಐ, ರೆವೂರ |
| ವಾಸಸ್ಥಳ | ಃ | ರೆವೂರ |

ದಿನಾಂಕಃ 24.10.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ದಿಃ 24-09-2021 ರಿಂದ ದಿಃ 30-07-2023 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 24-09-2021 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ದಿಃ 29-09-2021 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದೇ ದಿನ ಆರೋಪಿತರು ಠಾಣೆಗೆ ಹಾಜರಾಗಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ಕಾರಣ ಅವರನ್ನು ಬಿಡುಗಡೆ ಮಾಡಿ, ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ದಿಃ 29-09-2021 ರಂದು ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4 ಅಂತ ಗುರುತಿಸಲಾಯಿತು. ಸಾಕ್ಷಿಯು ಸಹಿಯನ್ನು ನಿಪಿ. 4ಎ ಅಂತಾ ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್ ಡಿ ಬಿ ವಕೀಲರಿಂದಃ**

ನಾನು ಗಾಯದ ಪ್ರಮಾಣ ಪತ್ರ ಪಡೆದುಕೊಂಡ ಆಸ್ಪತ್ರೆಯಲ್ಲಿ ಹೆಚ್ಚಾಗಿ ಅಪಘಾತಕ್ಕೆ ಸಂಬಂಧಿಸಿದ ಪ್ರಕರಣಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಿಪಿ. 4 ನ್ನು ಪಡೆಯುವ ಸಂಧರ್ಭದಲ್ಲಿ ವೈದ್ಯರಿಗೆ ಭೇಟಿ ಆದ ಬಗ್ಗೆ ನೆನಪು ಇರುವುದಿಲ್ಲ. ನಿಪಿ. 4 ನ್ನು ನನಗೆ ಚಾಸಾ 10 ರವರು ನೀಡಿರುತ್ತಾರೆ. ನಾವು ಮನವಿ ಪತ್ರ ಸಲ್ಲಿಸಿದಾಗ ಅವರು ನಮಗೆ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸದರಿ ಮನವಿ ಪತ್ರವನ್ನು ನಾನು ನೀಡಿರುವುದಿಲ್ಲ. ಹಿಂದಿನ ತನಿಖಾಧಿಕಾರಿಯವರು ನೀಡಿದ್ದು ನಾನು ಕೇವಲ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಾನು ಚಾಸಾ 10 ರವರಿಗೆ ಚಾಸಾ 1 ರವರು ಮೊದಲು ಬೇರೆ ಕಡೆ ಚಿಕಿತ್ಸೆ ಪಡೆದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಾನು ದಿಃ 24-09-2021 ರಿಂದ ದಿಃ 30-07-2023 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 24-09-2021 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ದಿಃ 29-09-2021 ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದೇ ದಿನ ಆರೋಪಿತರು ಠಾಣೆಗೆ ಹಾಜರಾಗಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ಕಾರಣ ಅವರನ್ನು ಬಿಡುಗಡೆ ಮಾಡಿ, ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ದಿಃ 29-09-2021 ರಂದು ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9777/2021 ಸಿ.ಡಬ್ಲ್ಯೂ–12 ಪಿ.ಡಬ್ಲ್ಯೂ–11

| | | |
|---|---|---|
| ಹೆಸರು | ಃ | ಉದ್ದಂಡಪ್ಪಾ |
| ತಂದೆಃಗಂಡ | ಃ | ಜ್ಯೋತಿಬಾ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | : | ಪಿ.ಐ. ಲೋಕಾಯುಕ್ತ ಬಿದರ |
| ವಾಸಸ್ಥಳ | ಃ | ಬಿದರ |

ದಿನಾಂಕಃ 24.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ**

ದಿಃ 15-12-2019 ರಿಂದ 24-09-2021 ರವರೆಗೆ ನಾನು ನರೋಣಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 16-08-2021 ರಂದು ರಾತ್ರಿ 8.30 ಗಂಟೆಗೆ ಚಾಸಾ 11 ರವರು ಯುನೈಟೇಡ್ ಆಸ್ಪತ್ರೆ ಕಲಬುರಗಿಯಲ್ಲಿ ಚಾಸಾ 1 ರವರು ನೀಡಿದ ಹೇಳಿಕೆಯ ಮೇರೆಗೆ ದೂರನ್ನು ತಂದು ಹಾಜರುಪಡಿಸಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಗುನ್ನಾ ಸಂಖ್ಯೆ 77/2021 ಅಂತಾ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ.ವರದಿಯನ್ನು ತಯಾರಿಸಿ ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 17-08-2021 ರಂದು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮತ್ತು ಚಾಸಾ 4 ರವರ ಸಮಕ್ಷಮದಲ್ಲಿ ಮಾಡಿ ಸ್ಥಳದಿಂದ ಒಂದು ಚಾಕು ಮತ್ತು ಚಪ್ಪಲಿಯನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 25-09-2021 ರಂದು ಚಾಸಾ 1 ರವರ ಮರುಹೇಳಿಕೆಯನ್ನು ಪಡೆದುಕೊಂಡು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 13 ರವರಿಗೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1ಸಿ ಅಂತ ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2ಸಿ ಅಂತ ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ. ವರದಿಯಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವ ವರದಿಯನ್ನು ನಿಪಿ. 3 ಅಂತ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ಈಗಾಗಲೇ ಗುರುತಿಸಲಾದ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್ ಡಿ ಬಿ ವಕೀಲರಿಂದಃ**

ಸಾಮಾನ್ಯವಾಗಿ ಎಮ ಎಲ್ ಸಿ ಪ್ರಕರಣಗಳು ದಾಖಲಾದರೆ ಆಸ್ಪತ್ರೆಯವರು ಒಂದು ಪ್ರತ್ಯೇಕ ದಾಖಲೆಯನ್ನು ನೀಡುತ್ತಾರೆ. ಸದರಿ ದಾಖಲೆಯನ್ನು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿಯ ಪಡೆದುಕೊಂಡಿಲ್ಲ ಅಂತಾ ನುಡಿಯುತ್ತಾರೆ. ಎಮ್. ಎಲ್. ಸಿ. ಸಂಖ್ಯೆಯನ್ನು ನಾನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಚಾಸಾ 11 ರವರು ತಂದ ಮಾಹಿತಿ ಮೇರೆಗೆ ನಾನು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸಾಕ್ಷಿಯುು ಅವರು ಸಲ್ಲಿಸಿದ ಲಿಖಿತ ದೂರನ್ನು ಆಧಾರವಾಗಿಟ್ಟುಕೊಂಡು ಪ್ರಕರಣ ದಾಖಲಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಗುನ್ಹಾ ಸ್ಥಳದಲ್ಲಿ ರಕ್ತದ ಖಲೆಗಳು ಇರಲಿಲ್ಲ, ಆದರೆ ಒಂದು ಚಾಕು ಮತ್ತು ಚಪ್ಪಲಿ ಇತ್ತು. ಸದರಿ ಚಾಕು ಸ್ಟೀಲ್ ಚಾಕು ಇದ್ದು, ಅದನ್ನು ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ಚಪ್ಪಲಿಯು ತೊಗಲಿನ ಚಪ್ಪಲಿ ಇದ್ದು, ಅದು ಬಲಗಾಲಿನ ಚಪ್ಪಲಿ ಇತ್ತು, ಅದನ್ನು ನಾನು ಪಂಚನಾಮೆಯಲ್ಲಿ ನಮೂದು ಮಾಡಿರುವುದಿಲ್ಲ. ಗುನ್ಹಾ ಸ್ಥಳವು ಚಾಸಾ 5 ರವರ ಮನೆಯ ಮುಂದೆ ಇದ್ದು, ಅಂದಾಜು 10 ಫೀಟ್ ಇತ್ತು, ಅದು ಸಾರ್ವಜನಿಕ ರಸ್ತೆ ಆಗಿತ್ತು. ನಾನು ಮನೆಯ ಸಂಖ್ಯೆಯನ್ನು ನೋಡಿರುವುದಿಲ್ಲ. ಸದರಿರವರ ಅಕ್ಕಪಕ್ಕದಲ್ಲಿ ಹಣಮಂತಪ್ಪ ಮತ್ತು ಶಾಂತಪ್ಪರವರ ಮನೆಗಳು ಇದ್ದವು. ಸದರಿ ಮನೆಗಳು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇರುತ್ತವೆ. ಉತ್ತರಕ್ಕೆ ಹಣಮಂತಪ್ಪರವರ ಮನೆ, ದಕ್ಷಿಣಕ್ಕೆ ಶಾಂತಪ್ಪರವರ ಮನೆ ಇರುತ್ತದೆ. ನಿಪಿ. 2 ರಲ್ಲಿ ನಾನು ಘಟನಾ ಸ್ಥಳಕ್ಕೆ ಮತ್ತು ಚಾಸಾ 5 ರವರ ಮನೆಯು ಎಷ್ಟು ಅಂತರದಲ್ಲಿ ಇರುತ್ತದೆ ಅಂತಾ ನಾನು ನಮೂದು ಮಾಡಿರುವುದಿಲ್ಲ. ನಿಪಿ. 2 ರಲ್ಲಿ ಚಾಸಾ 5 ರವರ ಮನೆ ಎಲ್ಲಿ ಇರುತ್ತದೆ

ಅಂತಾ ನಮೂದು ಮಾಡಿರುವುದಿಲ್ಲ. ನಾನು ದಿನಾಂಕ 17-08-2021 ರಂದು ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಮತ್ತು ದಿಃ 25-09-2021 ರಂದು ಚಾಸಾ 1 ರವರ ಮರುಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಮರುಹೇಳಿಕೆಯನ್ನು ಕೇರಿ ಅಂಬಲಗಾದಲ್ಲಿ ತೆಗೆದುಕೊಂಡಿರುತ್ತೇನೆ. ನಾನು ದಿಃ 25-09-2021 ರಂದು ತನಿಖೆ ಬಾಕಿ ಇದ್ದ ಕಾರಣ ಮತ್ತು ಪೆಟ್ರೋಲಂಗ್ ಕರ್ತವ್ಯದ ನಿಮಿತ್ಯ ಕೇರಿ ಅಂಬಲಗಾಗೆ ಹೋಗಿರುತ್ತೇನೆ. ಚಾಸಾ 1 ರವರ ಹೇಳಿಕೆಯನ್ನು ಚಾಸಾ 5 ರವರ ಮನೆಯ ಪಕ್ಕದ ಕಟ್ಟೆಯ ಮೇಲೆ ತೆಗೆದುಕೊಂಡಿರುತ್ತೇನೆ. ಚ ಾಸಾ 1 ರವರು ಕಲಬುರಗಿಯವರು. ನಾನು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಠಾಣೆಯಲ್ಲಿ ಕುಳಿತು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ